# ನಗರಸಭೆ ಕಾರ್ಯಾಲಯ, ವಿಜಾಪೂರ

ನಂ:ನಸವಿ.:ಲೋ.ವಿ.::ಟೆಂ.ಪ್ರ.: :2008-09 ದಿನಾಂಕ:29-07-2008

## ದರಖಾಸ್ತು ಪ್ರಕಟಣೆ

ಲೋಕೋಪಯೋಗಿ ಇಲಾಖೆಯಲ್ಲಿ ಹಾಗೂ ನಗರಸಭೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ದರ್ಜೆಯ ಯಾವತ್ತೂ ಮಕ್ತೇದಾರರಿಗೆ ಈ ಮೂಲಕ ತಿಳಿಸುವದೇನೆಂದರೆ ನಗರಸಭೆ ವತಿಯಿಂದ ಸನ್ 2007-08 ನೇ ಸಾಲಿನ ಶೇಕಡಾ 18 ರ ಯೋಜನೆಯಡಿ ಈ ಕೆಳಗೆ ಕಾಣಿಸಿದ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಮಾಡಲಿಚ್ಛಿಸುವ ಮಕ್ತೇದಾರರಿಂದ ಶೀಲ ಬಂದ ಶೇಕಡಾವಾರು ದರಗಳಲ್ಲಿ ಟೆಂಡರಗಳನ್ನು ಕರೆಯಲಾಗಿದ್ದು, ತಮ್ಮ ಮೊಹರಬಂದ ಟೆಂಡರ ದರಗಳನ್ನು ಕೆಳಗೆ ತಿಳಿಸಿದ ದಿನಾಂಕದೊಳಗಾಗಿ ಒಳಗಾಗಿ ಕಾರ್ಯಾಲಯಕ್ಕೆ ತಲುಪವಂತೆ ಕಳಿಸಿಕೊಡಬೇಕು.

| ಅ.ನಂ | ಕಾಮಗಾರಿಗಳ ಹೆಸರು | ಅಂದಾಜು ಮೊತ್ತ | ಠೇವಣಿ ಹಣ | ಫಾರ್ಮ ಫೀ | ಕೆಲಸ ಮುಗಿಸುವ ಅವಧಿ |
|---|---|---|---|---|---|
| 1 | ವಿಜಾಪೂರ ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜ ಆವರಣದಲ್ಲಿ ಶೌಚಾಲಯ ನಿರ್ಮಿಸುವದು. | 200000-00 | 5000-00 | 200-00 | 2 ತಿಂಗಳು |
| 2 | ನಗರರದ ಪ.ಜಾ. & ಪ.ಪಂ.ದ ಜನಾಂಗದವರ ಸಮಾಜ ಮಂದಿರ ರಿಪೇರಿ ಹಾಗೂ ಕಂಪೌಂಡ ಗೋಡೆ ಕಟ್ಟುವದು. | 500000-00 | 12500-00 | 500-00 | 2 ತಿಂಗಳು |
| 3 | ಭೂತನಾಳ ತಾಂಡಾದಲ್ಲಿ ಸಮುದಾಯ ಭವನ ನಿರ್ಮಿಸುವದು. | 200000-00 | 5000-00 | 200-00 | 2 ತಿಂಗಳು |

### -: ಕರಾರುಗಳು :-

1. ಖಾಲಿ ಟೆಂಡರ ಫಾರ್ಮಗಳಿಗಾಗಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ : 30-08-2008 ಸಂಜೆ 5-00 ಗಂಟೆಯವರೆಗೆ
2. ಖಾಲಿ ಟೆಂಡರ ಫಾರ್ಮಗಳನ್ನು ದಿನಾಂಕ: 04-09-2008 ರ ಸಂಜೆ 5-00 ಘಂಟೆಯವರೆಗೆ ಪೂರೈಸಲಾಗುವದು.
3. ಭರ್ತಿ ಮಾಡಿದ ಟೆಂಡರ ಫಾರ್ಮಗಳು ಸಲ್ಲಿಸುವ ದಿನಾಂಕ: 06-09-2008 ಸಂಜೆ 4-30 ಘಂಟೆಯವರೆಗೆ
4. ದಿನಾಂಕ: 06-09-2008 ರಂದು ಸಂಜೆ 5-30 ಘಂಟೆಗೆ ನಗರಸಭೆಯ ಸಭಾಭವನದಲ್ಲಿ ಹಾಜರಿರುವ ಬಿಡ್ಡುದಾರರ ಸಮಕ್ಷಮದಲ್ಲಿ ಸ್ವೀಕೃತವಾಗಿರುವ ಟೆಂಡರಗಳನ್ನು ಹಾಗೂ ದರವಾರುಗಳನ್ನು ತೆರೆಯಲಾಗುವದು.
5. ಸೂಚಿಸಿದ ದಿನಾಂಕಗಳಂದು ರಜೆ ಘೋಷಿಸಲ್ಪಟ್ಟರೆ ಮುಂದಿನ ಕೆಲಸದ ದಿನ ಅಂತ ಪರಿಗಣಿಸುವದು.
6. ಖುಲ್ಲಾ ಟೆಂಡರಗಳ ಫಾರ್ಮಗಳ ಬೆಲೆಯನ್ನು ನಗರಸಭೆಯಲ್ಲಿ ಪಾವತಿಸಿ ಅರ್ಜಿ ಸಂಗಡ ಲಗತ್ತಿಸತಕ್ಕದ್ದು.
7. ಟೆಂಡರ ಫಾರ್ಮ ಸಲುವಾಗಿ ಅರ್ಜಿ ಸಲ್ಲಿಸುವಾಗ ಕಾಮಗಾರಿಯ ಇ.ಎಂ.ಡಿ. ಹಣದ ಡಿ.ಡಿ.ಯನ್ನು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು.
8. ದರಖಾಸ್ತು ಮೋಹರಬಂದ ಮಾಡಿದ್ದು ಇರತಕ್ಕದ್ದು.
9. ಠೇವಣಿ ಇಡದ ಮತ್ತು ಅವಧಿ ಮೀರಿಬಂದ ದರಖಾಸ್ತುಗಳನ್ನು ಪರಿಗಣಿಸಲಾಗುವುದಿಲ್ಲ
10. ಕಾಮಗಾರಿಯನ್ನು ಕಡ್ಡಾಯವಾಗಿ ಪೌರಾಡಳಿತ ನಿರ್ದೇಶನಾಲಯ ಅಥವಾ ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ನಿಯಮಿಸಿದ ಅಧಿಕೃತ ಥರ್ಡ ಪಾರ್ಟಿ ಅವರಿಂದ ತಪಾಸಣೆ ಮಾಡಿಸತಕ್ಕದ್ದು. ಹಾಗೂ ಕಾಮಗಾರಿಗೆ ಉಪಯೋಗಿಸುವ ಎಲ್ಲಾ ಸಾಮಗ್ರಿಗಳ ಗುಣ ನಿಯಂತ್ರಣ ತಪಾಸಣೆ ಮಾಡಿಸತಕ್ಕದ್ದು.
11. ಕಾಮಗಾರಿ ಮಾಡಿ ಮುಗಿಸಿದ ನಂತರ 2 ವರ್ಷದವರೆಗೆ ಗುತ್ತಿಗೆದಾರರು ಸದರಿ ಕೆಲಸದ ಜವಾಬ್ದಾರಿ ವಹಿಸಿಕೊಡತಕ್ಕದ್ದು.
12. ನಗರಸಭೆಯಿಂದ ಯಾವುದೇ ತರಹದ ಸಾಮಾಗ್ರಿಗಳನ್ನು ಪೂರೈಸಲಾಗುವದಿಲ್ಲ.
13. ಯಾವುದೇ ಕಾರಣ ಕೊಡದೇ ಯಾವದೇ ದರಖಾಸ್ತುಗಳನ್ನು ಸ್ವೀಕರಿಸುವ ಇಲ್ಲವೆ ಯಾವದೇ ದರಖಾಸ್ತುಗಳನ್ನು ತಿರಸ್ಕರಿಸುವ ಅಧಿಕಾರ ಸಕ್ಷಮ ಅಧಿಕಾರಿಗಳಿಗೆ ಒಳಪಟ್ಟಿರುತ್ತದೆ.
14. ಟೆಂಡರ ಕಾಮಗಾರಿಯು ಫಾರ್ಮ ನಂ:ಪಿಡಬ್ಲ್ಯೂಡಿ: 65 ಪ್ಯಾರಾ ನಂ. 167(1) ಅಪ್ ಕೆಪಿಡಬ್ಲ್ಯುಡಿ ಕೋಡರಂತೆ ಪುಟ ಸಂಖ್ಯೆ: 1 ರಿಂದ 2ವರೆಗೆ ಒಳಪಟ್ಟಿರುತ್ತದೆ.
15. ಮಕ್ತೇದಾರರು ಕಾಮಗಾರಿಗಳನ್ನು ನಗರಸಭೆಯ ಪಾರದರ್ಶಕತಾ ನಿಯಮದಡಿ ಮಾಡತಕ್ಕದ್ದು.
16. ಅಂದಾಜು ಪತ್ರಿಕೆಯ ದರಕ್ಕಿಂತ ಕಡಿಮೆ ದರ ಸೂಚಿಸಲು ಬಯಸುವ ಗುತ್ತಿಗೆದಾರರು ವ್ಯತ್ಯಾಸ ಮೊತ್ತದ ಡಿ.ಡಿ.ಯನ್ನು ಟೆಂಡರ ಜೊತೆಗೆ ಲಗತ್ತಿಸತಕ್ಕದ್ದು ಇಲ್ಲವಾದಲ್ಲಿ ಅಂತಹ ಟೆಂಡರಗಳನ್ನು ತಿರಸ್ಕರಿಸಲಾಗುವುದು.
17. ಕಾಮಗಾರಿ ನಡೆಯುವ ಸ್ಥಳದಲ್ಲಿ ಕಾಮಗಾರಿಯ ಪೂರ್ಣ ಮಾಹಿತಿಯುಳ್ಳ ಸೂಚನಾ ಫಲಕವನ್ನು ಅಳವಡಿಸತಕ್ಕದ್ದು ಮತ್ತು ಕಾಮಗಾರಿ ಸ್ಥಳದಲ್ಲಿ ಗುತ್ತಿಗೆದಾರರವತಿಯಿಂದ ಡಿ.ಸಿ.ಇ. ವಿದ್ಯಾರ್ಹತೆಯುಳ್ಳವರನ್ನು ಕಾಮಗಾರಿಯ ವೇಳೆ ಮೇಲುಸ್ತುವಾರಿ ನೋಡಿಕೊಳ್ಳಲು ನಿಯೋಜಿಸುವುದು.ಕಾಮಗಾರಿಗಳ ಮೂರು ಹಂತದ ಛಾಯಾ ಚಿತ್ರವನ್ನು ಕಡ್ಡಾಯವಾಗಿ ತೆಗೆಯತಕ್ಕದ್ದು (ಕಾಮಗಾರಿಯ ಪೂರ್ವದಲ್ಲಿ, ಪ್ರಗತಿಯಲ್ಲಿದ್ದಾಗ ಹಾಗೂ ಕಾಮಗಾರಿ ಪೂರ್ಣಗೊಂಡ ನಂತರ)
18. ನಿಗದಿತ ಸಮಯದೊಳಗೆ ಕಾಮಗಾರಿ ಪೂರ್ತಿಗೊಳಿಸದೇ ಇದ್ದಲ್ಲಿ ತಮಗೆ ಯಾವುದೇ ನೋಟಿಸನ್ನು ನೀಡದೇ ತಮ್ಮ ಟೆಂಡರ ರದ್ದುಗೊಳಿಸಿ 2ನೇ ಕಡಿಮೆ ದರ ಇದ್ದ ಗುತ್ತಿಗೆದಾರರಿಂದ ಕೆಲಸ ಮಾಡಿಸಲು ಕ್ರಮ ಜರುಗಿಸಲಾಗುವುದು ಹಾಗೂ ಹೆಚ್ಚಿಗೆ ಬೀಳುವ ಮೊತ್ತವನ್ನು ತಮ್ಮಿಂದ ವಸೂಲಿ ಮಾಡಲಾಗುವುದು.
19. ನಗರಸಭೆಯಿಂದ ಕಾಲಕಾಲಕ್ಕೆ ವಿಧಿಸುವ ಕರಾರುಗಳಿಗೆ ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು.

| | | |
|---|---|---|
| ಸಹಿ/- | ಸಹಿ/- | ಸಹಿ/- |
| (ಶ್ರೀ.ಕೆ.ಕೆ.ಜಾಲಿಬೇರಿ)ಬಿ.ಇ. | (ಶ್ರೀ.ಎಸ್.ಬಿ.ಕಟ್ಟಿಮನಿ) ಕೆ.ಎಂ.ಎ.ಎಸ್. | (ಶ್ರೀಮತಿ.ಚಾಂದೂಬಾಯಿ.ಚವ್ಹಾಣ) |
| ಸ.ಕಾ.ಅಭಿಯಂತರರು | ಪೌರಾಯುಕ್ತರು | ಅಧ್ಯಕ್ಷರು |
| ನಗರಸಭೆ ವಿಜಾಪೂರ | ನಗರಸಭೆ ವಿಜಾಪೂರ | ನಗರಸಭೆ ವಿಜಾಪೂರ |